ಜಾತಿ ಪ್ರಮಾಣ ಪತ್ರ ಹಾಗೂ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ನೀಡುವ ಅಧಿಕಾರವು ಕಂದಾಯ ಇಲಾಖೆಯ ಆಯಾ ತಾಲ್ಲೂಕು ತಹಶೀಲ್ದಾರ್‌ರವರಿಗೆ ಇರುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡುವ ಜಾತಿ ಪ್ರಮಾಣ ಪತ್ರವು ಇತ್ತೀಚಿನ ಸರ್ಕಾರಿ ಸುತ್ತೋಲೆ ಸಂಖ್ಯೆ ಎಸ್‌ಡಬ್ಲ್ಯೂಡಿ 155 ಬಿಸಿಎ 2012 ದಿನಾಂಕ: 22–02–2012ರ ಪ್ರಕಾರ ಜಾತಿ ಪ್ರಮಾಣ ಪತ್ರವು ರದ್ದಾಗುವವರೆವಿಗೂ ಸಿಂಧುವಾಗಿರುತ್ತದೆ. ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರಗಳನ್ನು ಪಡೆಯಲು ಅನುಕೂಲವಾಗುವಂತೆ ರಾಜ್ಯ ಸರ್ಕಾರವು ನೆಮ್ಮದಿ ಕೇಂದ್ರಗಳನ್ನು ಸ್ಥಾಪಿಸಿರುವುದರಿಂದ ಅಭ್ಯರ್ಥಿಗಳಿಗೆ ಅನುಕೂಲವಾಗುತ್ತಿರುವುದು ಕಂಡು ಬರುತ್ತದೆ.

ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ಅಂಗವಿಕಲರ ವೇತನದ ಫಲಾನುಭವಿಗಳು

736 (56) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) ವಿಧಾನ ಸಭೆಯ ಸದಸ್ಯರು : ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಇಲ್ಲಿಯವರೆಗೆ ರಾಜ್ಯದಲ್ಲಿ ಎಷ್ಟು ಜನರಿಗೆ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ಅಂಗವಿಕಲರ ವೇತನವನ್ನು ಮಂಜೂರು ಮಾಡಲಾಗಿದೆ: (ಜಿಲ್ಲಾವಾರು ವಿವರ ನೀಡುವುದು)

ಆ) ಈ ಫಲಾನುಭವಿಗಳ ಪೈಕಿ ಇಲ್ಲಿಯವರೆಗೆ ಎಷ್ಟು ಫಲಾನುಭವಿಗಳಿಗೆ ಮಂಜೂರಾಗಿದ್ದ ವೇತನವನ್ನು ನಿಲ್ಲಿಸಲಾಗಿದೆ

ಇ) ಇದಕ್ಕೆ ಕಾರಣಗಳೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಉಪ ಮುಖ್ಯಮಂತ್ರಿ) :

ಅ) ರಾಜ್ಯದಲ್ಲಿ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಯೋಜನೆ ಹಾಗೂ ಅಂಗವಿಕಲ ವೇತನ ಯೋಜನೆ ಗಳಡಿಯಲ್ಲಿ ಒಟ್ಟು 22,95,226 ಫಲಾನುಭವಿಗಳು ಮಾಸಾಶನ ಪಡೆಯುತ್ತಿರುತ್ತಾರೆ (ಜಿಲ್ಲಾವಾರು ವಿವರವನ್ನು ಅನುಬಂಧ–1 ನ್ನು ಲಗತ್ತಿಸಿದೆ).

ಆ) ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಯೋಜನೆ ಹಾಗೂ ಅಂಗವಿಕಲ ವೇತನ ಯೋಜನೆಗಳಡಿ ಇಲ್ಲಿಯವರೆಗೂ ಒಟ್ಟು 6,97,852 ಫಲಾನುಭವಿಗಳಿಗೆ ಮಾಸಾಶನವನ್ನು ನಿಲ್ಲಿಸಲಾಗಿದೆ. (ಜಿಲ್ಲಾವಾರು ವಿವರವನ್ನು ಅನುಬಂಧ–2ನ್ನು ಲಗತ್ತಿಸಿದೆ).

ಇ) ಒಂದಕ್ಕಿಂತ ಹೆಚ್ಚು ಪಿಂಚಣಿ ಪಡೆಯುತ್ತಿರುವ, ಮರಣ, ವಲಸೆ ಹಾಗೂ ನಿಗದಿತ ಮಿತಿಗಿಂತ ಆದಾಯ ಜಾಸ್ತಿ ಇರುವ ಫಲಾನುಭವಿಗಳ ಪಿಂಚಣಿಯನ್ನು ಮಾತ್ರ ಸ್ಥಗಿತಗೊಳಿಸಲಾಗಿದ್ದು, ಉಳಿದ ಅರ್ಹ ಫಲಾನುಭವಿಗಳಿಗೆ ಪಿಂಚಣಿಯನ್ನು ಪಾವತಿಸಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 56 ಕ್ಕೆ ಅನುಬಂಧ–1

ಕ್ರ ಸಂ.	ಜಿಲ್ಲೆ ಹೆಸರು	ವೃದ್ಧಾಪ್ಯ ವೇತನ	ಅಂಗವಿಕಲ ವೇತನ	ಸಂಧ್ಯಾ ಸುರಕ್ಷಾ	ಒಟ್ಟು
1	ಬಾಗಲಕೋಟೆ	11010	24440	46028	81478
2	ಬೆಂಗಳೂರು ನಗರ	25941	17706	61357	105004
3	ಬೆಂಗಳೂರು ಗ್ರಾಮಾಂತರ	18360	8319	32080	58759
4	ಬೆಳಗಾಂ	45542	49283	87516	182341
5	ಬಳ್ಳಾರಿ	26475	23857	42273	92605
6	ಬೀದರ್	14598	17143	49009	80750
7	ಬಿಜಾಪುರ	32939	24513	42486	100838
8	ಚಾಮರಾಜ ನಗರ	38117	14192	22656	74965
9	ಚಿಕ್ಕಮಗಳೂರು	5183	9542	21976	36701
10	ಚಿಕ್ಕಬಳ್ಳಾಪುರ	12430	12685	30790	55905
11	ಚಿತ್ರದುರ್ಗ	7586	19637	35501	62724
12	ದಾವಣಗೆರೆ	8874	19501	50794	79169
13	ಧಾರವಾಡ	14972	20844	39479	75295
14	ಗದಗ	16725	19690	24129	60544
15	ಗುಲ್ಬರ್ಗಾ	41516	22950	37829	102295

16	ಹಾಸನ	52925	21485	28364	102774
17	ಹಾವೇರಿ	6884	24757	41495	73136
18	ಉತ್ತರ ಕನ್ನಡ	4407	12752	22725	39884
19	ಕೋಲಾರ	27674	15326	44988	87988
20	ಕೊಪ್ಪಳ	12410	18128	35094	65632
21	ಕೊಡಗು	2594	3918	7832	14344
22	ಮಂಡ್ಯ	38467	27435	56827	122729
23	ದಕ್ಷಿಣ ಕನ್ನಡ	5509	14568	22689	42766
24	ಮೈಸೂರು	32205	26898	55547	114650
25	ರಾಯಚೂರು	16491	12989	20855	50335
26	ರಾಮನಗರ	27000	13231	34893	75124
27	ಶಿವಮೊಗ್ಗ	5624	14930	29452	50006
28	ತುಮಕೂರು	17992	30131	69686	117809
29	ಉಡುಪಿ	1869	10618	34592	47079
30	ಯಾದಗಿರಿ	6995	9055	25547	41597
ಒಟ್ಟು		**5.79.314**	**5.61.423**	**11.54.489**	**22.95.226**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 56 ಕ್ಕೆ ಅನುಬಂಧ–2

ಕ್ರ ಸಂ.	ಜಿಲ್ಲೆ ಹೆಸರು	ವೃದ್ದಾಪ್ಯ ವೇತನ	ಅಂಗವಿಕಲ ವೇತನ	ಸಂಧ್ಯಾ ಸುರಕ್ಷಾ	ಒಟ್ಟು
1	ಬಾಗಲಕೋಟೆ	5801	12139	5741	23681
2	ಬೆಂಗಳೂರು ನಗರ	28622	34393	19927	82942
3	ಬೆಂಗಳೂರು ಗ್ರಾಮಾಂತರ	4424	4345	1613	10382
4	ಬೆಳಗಾಂ	29529	38283	19846	87658
5	ಬಳ್ಳಾರಿ	5470	6787	2397	14654
6	ಬೀದರ್	5756	15822	5252	26830
7	ಬಿಜಾಪುರ	28740	23311	18002	70053
8	ಚಾಮರಾಜ ನಗರ	1828	982	785	3595
9	ಚಿಕ್ಕಮಗಳೂರು	1303	2966	1872	6141

10	ಚಿಕ್ಕಬಳ್ಳಾಪುರ	4447	6275	3234	13956
11	ಚಿತ್ರದುರ್ಗ	1587	4944	3383	9914
12	ದಾವಣಗೆರೆ	2953	11200	5213	19366
13	ಧಾರವಾಡ	1345	4206	1753	7304
14	ಗದಗ	10774	4458	2113	17345
15	ಗುಲ್ಬರ್ಗಾ	25549	23835	14642	64026
16	ಹಾಸನ	6187	4169	2465	13121
17	ಹಾವೇರಿ	2998	13687	6783	23468
18	ಉತ್ತರ ಕನ್ನಡ	1155	2160	1703	5018
19	ಕೋಲಾರ	7751	4799	2373	14923
20	ಕೊಪ್ಪಳ	2807	7856	3440	14103
21	ಕೊಡಗು	926	1163	769	2858
22	ಮಂಡ್ಯ	9372	4169	4109	17650
23	ದಕ್ಷಿಣ ಕನ್ನಡ	1247	1831	2264	5342
24	ಮೈಸೂರು	14836	10693	6964	32493
25	ರಾಯಚೂರು	14891	11188	5661	31740
26	ರಾಮನಗರ	8378	5090	3424	16892
27	ಶಿವಮೊಗ್ಗ	2430	4972	4204	11606
28	ತುಮಕೂರು	7867	21048	10153	39068
29	ಉಡುಪಿ	227	1476	558	2261
30	ಯಾದಗಿರಿ	3277	4342	1843	9462
ಒಟ್ಟು		**2,42,477**	**2,92,589**	**1,62,786**	**6,97,852**

ಸಮುದಾಯ ಭವನಗಳಿಗೆ ಅನುದಾನ ಬಿಡುಗಡೆ ಮಾಡಿದ ಬಗ್ಗೆ

734 (237) ಶ್ರೀ ರಾಜಶೇಖರ ಬಸವರಾಜ ಪಾಟೀಲ್ : ಮಾನ್ಯ ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯಾದ್ಯಂತ ಡಾ:ಬಿ.ಆರ್. ಅಂಬೇಡ್ಕರ್/ಡಾ: ಬಾಬು ಜಗ ಜೀವನರಾಂ ಸಮುದಾಯ ಭವನಗಳ ನಿರ್ಮಾಣಕ್ಕೆ 91.51 ಕೋಟಿ ರೂ. ಬಿಡುಗಡೆ ಮಾಡಿರುವುದು ನಿಜವೆ;